ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕೊರೆದಿರುವ ಒಟ್ಟು ಕೊಳವೆಬಾವಿಗಳ ಸಂಖ್ಯೆ 11923 ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಆ) ಅವುಗಳ ಪೈಕಿ 936 ಕೊಳವೆಬಾವಿಗಳು ಕೆಟ್ಟಿದ್ದು ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಇ) ಬಂದಿದೆ.

ಈ) ಕೆಟ್ಟಿರುವ ಕೈಪಂಪು ಕೊಳವೆಬಾವಿಗಳನ್ನು ಆದ್ಯತೆ ಮೇಲೆ ದುರಸ್ತಿ ಮಾಡಲಾಗುತ್ತಿದೆ.

ಅನುಬಂಧ - 1

ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕೊರೆಯುವ ಮತ್ತು ಕೆಟ್ಟಿರುವ ಕೊಳವೆ ಬಾವಿಗಳ ವಿವರಗಳು

ಕ್ರಮ ಸಂಖ್ಯೆ	ತಾಲ್ಲೂಕು	ಒಟ್ಟು ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ	ಕೆಟ್ಟಿರುವ ಕೊಳವೆ ಬಾವಿಗಳ ಸಂಖ್ಯೆ
1.	ರಾಮನಗರ	1456	160
2.	ಚನ್ನಪಟ್ಟಣ	1595	45
3.	ಕನಕಪುರ	2369	130
4.	ಮಾಗಡಿ	1694	68
5.	ದೇವನಹಳ್ಳಿ	788	39
6.	ದೊಡ್ಡಬಳ್ಳಾಪುರ	1488	168
7.	ಹೊಸಕೋಟೆ	1203	216
8.	ನೆಲಮಂಗಲ	1330	110
	ಒಟ್ಟು	**11923**	**936**

ವಿಶ್ವ ವಿದ್ಯಾಲಯಗಳ ಸ್ವಯಂ ಆರ್ಥಿಕ ಯೋಜನೆ

267 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸ್ವಯಂ ಆರ್ಥಿಕ ನೆರವಿನ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿದ ವಿಶ್ವವಿದ್ಯಾಲಯಗಳು ಯಾವುವು?*

ಅ) *ಸದರಿ ವಿಶ್ವವಿದ್ಯಾಲಯಗಳು ಈ ಯೋಜನೆಯನ್ನು ಎಂದು ಸಲ್ಲಿಸಿದೆ? (ಸದರಿ ಯೋಜನೆಯ ಪ್ರತಿ ಒದಗಿಸುವುದು)*

ಇ) *ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?*

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಸ್ವಯಂ ಆರ್ಥಿಕ ನೆರವಿನಿಂದ ಕೋರ್ಸುಗಳನ್ನು ನಡೆಸಲು ಪರಿನಿಯಮಾವಳಿಯನ್ನು ರಚಿಸಿ ಕುಲಾಧಿಪತಿಗಳ ಅನುಮೋದನೆ ಪಡೆಯಲಾಗುತ್ತದೆ. ಅವುಗಳ ವಿವರ ಈ ಕೆಳಕಂಡಂತಿದೆ. (ಯಾವುದೇ ಯೋಜನೆಗಳಿಲ್ಲ).

ಆ)

ಕುವೆಂಪು ವಿಶ್ವವಿದ್ಯಾಲಯ		ಮೈಸೂರು ವಿಶ್ವವಿದ್ಯಾಲಯ		ಗುಲ್ಬರ್ಗಾ ವಿಶ್ವವಿದ್ಯಾಲಯ	
ಯಾವಾಗ ಸಲ್ಲಿಸಿದೆ	ಕೋರ್ಸಿನ ವಿವರ	ಯಾವಾಗ ಸಲ್ಲಿಸಿದೆ	ಕೋರ್ಸಿನ ವಿವರ	ಯಾವಾಗ ಸಲ್ಲಿಸಿದೆ	ಕೋರ್ಸಿನ ವಿವರ
11-11-1998	1. ಕಂಪ್ಯೂಟರ್ ಸೈನ್ಸ್ ಮತ್ತು ಇನ್‌ಫರ್‌ಮೇಷನ್ ಸಿಸ್ಟಮ್ 2. ಎಂ.ಇ.ಎಂ. 3. ಎಂ.ಎಸ್.ಡಬ್ಲ್ಯೂ	1998	ಎಂಟೆಕ್ ಸ್ನಾತಕೋತ್ತರ ಕೋರ್ಸಿನ ಕಂಪ್ಯೂಟರ್ ಸೈನ್ಸ್ ಮತ್ತು ಟೆಕ್ನಾಲಜಿ ಮತ್ತು ಸ್ನಾತಕೋತ್ತರ ಕೋರ್ಸು	28-7-1999	ಪಿಜಿ ಡಿಪ್ಲೋಮಾ ಮತ್ತು ಪಿಜಿ ಸರ್ಟಿಫಿಕೇಟ್ ಕೋರ್ಸುಗಳು
11-11-1998	ಸಹ್ಯಾದ್ರಿ ವಿಜ್ಞಾನ ಕಾಲೇಜು ಮತ್ತು ಕಲಾ ಕಾಲೇಜು			ಮಂಗಳೂರು ವಿಶ್ವವಿದ್ಯಾಲಯ ಯಾವಾಗ ಕೋರ್ಸಿನ ವಿವರ ಸಲ್ಲಿಸಿದೆ.	
6.3.2000	ಬಿ.ಎಸ್ಸಿ ಕೋರ್ಸಿನಲ್ಲಿ			25-5-96	ಎಂಬಿಎ, ಎಂಸಿಎ
	1. ಪಿಎಂಸಿ			14-7-97	ಎಂಎಸ್ಸಿ ಕಂಪ್ಯೂಟರ್ ಸೈನ್ಸ್
	2. ಪಿಇಸಿ			5-11-99	ಎಂಎಸ್ಸಿ ಕಂಪ್ಯೂಟರ್ ಸಾಫ್ಟ್‌ವೇರ್, ಎಂಎಸ್ಸಿ ಎಲೆಕ್ಟ್ರಾನಿಕ್ಸ್, ಎಂಎಸ್ಸಿ ಇನ್‌ಫರ್‌ಮೇಷನ್ ಸಿಸ್ಟಮ್
	3. ಬಿಬಿಎಂ				

ವಿಶ್ವವಿದ್ಯಾಲಯಗಳಲ್ಲಿ ಸ್ವಯಂ ಆರ್ಥಿಕ ಕೋರ್ಸುಗಳನ್ನು ತೆರೆಯಲು ಪ್ರೋತ್ಸಾಹಿಸಲಾಗುತ್ತಿದೆ.

ರಾಜ್ಯದಲ್ಲಿ ಮಂಗನ ಕಾಯಿಲೆ ವ್ಯಾಕ್ಸಿನ್ ಘಟಕಗಳು

268 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?